# ನಮಸ್ತೆ ಟ್ರಂಪ್

ಮೋದಿಯ ಮನದಲದೆಂತಹ
ಚೋದದ ಮಂತ್ರವಿರುತಿಹುದು ದೊಡ್ಡಣ್ಣನನುಂ ।
ಮೋದಿಯ ಮುಂದೆ ತಲೆಯ ತ
ಗ್ಗಿದ ರೀತಿಯಲಿ ನಿಲಿಸುತಿದೆ ತೋರುತ ಚೋದಂ ॥ 1 ॥

ದೂರದಮೆರಿಕಾದಿಂದಂ
ಭಾರತಕಾಗಮಿಸಿದ ದೊರೆ ದೊಡ್ಡಣ್ಣನಿಗಂ ।
ದಾರಿಯ ಇಕ್ಕೆಲದಲ್ಲಿಯು
ತೋರುತಿದೆ ಸ್ವಾಗತ ಫಲಕ ಕರಮೆಸೆಯುತಂ ॥ 2 ॥

ಭರತ ಭುವಿಗೆ ದೊಡ್ಡಣ್ಣನ
ಕರೆತಂದು ಕೊಡುತಿಹೆವು ಸಕಲ ಪುರದ ಜನರಿಂ ।
ಪರಿಪರಿಯ ಗೌರವಾದರ
ವರವಾಯ್ತು ಟ್ರಮ್ಪರಸಗೆ ನಮಸ್ತೆಯೆನುತಂ ॥ 3 ॥

ನಮನ ಟ್ರಂಪಣ್ಣ ನಿಮಗ
ಹಮದಾಬಾದಿನಲಿ ಸೇರಿದೆಲ್ಲ ಸುಜನರಿಂ ।
ನಮಿಸುತ ಬಯಸುತಿಹೆವು ಕೊಡ
ನುಮತಿಯ ಸಂಹರಿಸಲಾಂ ಭಯೋತ್ಪಾದಕರಂ ॥ 4 ॥

ದೊಡ್ಡಣ್ಣನು ನೀಡಲಿ ನಮ
ಗಡ್ಡ ಬರದತೆರದಭಯವ ನೆರೆಹೊರೆ ದೇಶಂ ।
ದೊಡ್ಡ ವಣಿಕರಂ ಕರೆದವ
ರಡ್ಡದಲಿ ಹಣ ತೊಡಗಿಸಲು ಕೊಡಲನುಮತಿಯಂ ॥ 5 ॥


**ರವೀಶ್ ಕುಮಾರ್ ಬಿ.**
ಕನ್ನಡ ಭಾಷಾ ಶಿಕ್ಷಕರು,
ಸ. ಪ್ರೌ. ಶಾಲೆ, ಕೇರ್ಗಳ್ಳಿ,
ಮೈಸೂರು ತಾಲೂಕು ಮತ್ತು ಜಿಲ್ಲೆ.
9448958498